ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ, ದಿನಾಂಕ ೧೦ನೇ ಸೆಪ್ಟೆಂಬರ್ ೧೯೮೭ ಭಾದ್ರಪದ ೧೯, ೧೯೦೮ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು].

ಸಂತಾಪ ಸೂಚನೆ

ಅಧ್ಯಕ್ಷರು.—ಮಾಜಿ ವಿಧಾನ ಸಭಾ ಸದಸ್ಯರಾಗಿದ್ದು ಶ್ರೀ ಕೆ. ಪಟ್ಟಾಭಿರಾಮನ್‌ರವರು ದಿನಾಂಕ ೯-೯-೧೯೮೭ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ. ಮಾನ್ಯರು ೧೯೫೨ರಿಂದ ೧೯೫೭ರವರೆಗೆ ವಿಧಾನ ಸಭೆಯ ಸದಸ್ಯರಾಗಿದ್ದರು. ಶ್ರೀಯುತರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅಲ್ಲದೇ ಪತ್ರಕರ್ತರೂ ಸಹ ಆಗಿದ್ದರು.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನೆಯನ್ನು ಆಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ವರಾಹಿ ಯೋಜನೆಯ ಮಾರಡಿ ರೇಂಜ್‌ನಿಂದ ಮರಮಟ್ಟುಗಳ ಬಿಡುಗಡೆ

೬೨೯. ಶ್ರೀ ಬಿ.ಎ. ಉಮರಬ್ಬ (ವಿಟ್ಲ). —ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವರಾಹಿ ಯೋಜನೆ ಅರಣ್ಯ ವೃತ್ತದಲ್ಲಿರುವ ವರಾಹಿ ಅರಣ್ಯ ಸಂಸ್ಕರಣ ವಿಭಾಗದ ಮಾರಡಿ ರೇಂಜ್ ೧೪೭ನೇ ನಂಬರ್ ಕೂಪಿನಿಂದ ಬಿಡುಗಡೆಯಾದ ಕಟ್ಟಿಗೆ ಮತ್ತು ಮರದ ಪ್ರಮಾಣ ವೆಷ್ಟು? (ಈ ೧೪೭ನೇ ಕೂಪ್ ಪ್ರಾರಂಭವಾದ ತಾರೀಖಿನಿಂದ)

ಆ) ಮಾರಡಿ ರೇಂಜ್ ೧೪೭ನೇ ನಂಬರ್ ಕೂಪಿನಲ್ಲಿ ಈಗ ಸಂಗ್ರಹದಲ್ಲಿರುವ ಕಟ್ಟಿಗೆ ಮತ್ತು ಮರಗಳ ಪ್ರಮಾಣವೆಷ್ಟು? (ಸರ್ಕಾರಿ ಮತ್ತು ಖಾಸಗಿ ಸಂಗ್ರಹದ ಪ್ರತ್ಯೇಕ ವಿವರಗಳು).